ದಿ. 30.11.2019ರಂದು ಸಾಕ್ಷಿಯನ್ನು ಮತ್ತೆ ಕರೆಸಿ ಪ್ರಮಾಣವಚನ ಬೋಧಿಸಲಾಯ್ತು.

**ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ** ನಾನು ಸಾಕ್ಷಿ ನೀಡಿರುವ ಎಲ್ಲಾ ಆರೋಪಿಗಳನ್ನು ನೋಡಿದರೆ ಗುರುತಿಸಬಲ್ಲೆ. 1ರಿಂದ 13ನೇ ಆರೋಪಿಗಳನ್ನು ನಾನು ಈ ಹಿಂದೆ ನೋಡಿ ಗುರುತಿಸಿದ್ದೆ. ಉಳಿದ ಆರೋಪಿಗಳನ್ನು ನಾನು ಈ ದಿನ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ನನ್ನನ್ನು ಪೋಲಿಸರು ಮೂರು ಬಾರಿ ಠಾಣೆಗೆ ಕರೆಸಿದ್ದರು.

ಘಟನೆ ನಡೆದ ಒಂದು ತಿಂಗಳಿನ ನಂತರ ಪೋಲಿಸರು ನನ್ನನ್ನು ಠಾಣೆಗೆ ಕರೆಸಿದ್ದರು. ಮೃತ 8ನೇ ಆರೋಪಿ ನನಗೆ ಕಾಲಿಗೆ ಹೊಟ್ಟೆಗೆ ದೊಣ್ಣೆಯಿಂದ ಹೊಡೆದಿದ್ದರು ಎಂದು ಪೋಲಿಸ್ ಠಾಣೆಯಲ್ಲಿ ಆತನನ್ನು ಗುರುತಿಸಿ ಹೇಳಿಕೆ ನೀಡಿದ್ದೆ. ಘಟನೆಯಾದ ಎರಡು ತಿಂಗಳ ನಂತರ ಮತ್ತೆ ನನ್ನನ್ನು ಪೋಲಿಸರು ಠಾಣೆಗೆ ಕರೆಸಿದ್ದರು. ಆನಂದಗೌಡ ನನ್ನ ತಮ್ಮ ದೇವರಾಜುರವರಿಗೆ ಕಾಲಿನಿಂದ ಒದ್ದಿದ್ದರು ಎಂದು ಆರೋಪಿಯನ್ನು ಗುರುತಿಸಿ ಪೋಲಿಸರ ಮುಂದೆ ಹೇಳಿಕೆ ನೀಡಿದ್ದೆ.

ನಾನು ಮೋಟಾರ್‌ಸೈಕಲ್ ಮತ್ತು ಮೋಟಾರ್ ಸೈಕಲ್‌ನ ಫೋಟೋ ನೋಡಿದರೆ ಗುರುತಿಸಬಲ್ಲೆ. ಈ ಹಂತದಲ್ಲಿ ಸದರಿ ಮೋಟಾರ್ ಸೈಕಲ್‌ನ ಫೋಟೋಗಳು ಕಡತದಲ್ಲಿ ಲಭ್ಯವಿರುವುದಿಲ್ಲವಾದ್ದರಿಂದ ಗುರುತಿಸಿರುವುದಿಲ್ಲ.

ನನ್ನ, ಚಾಸಾ-4 ಮತ್ತು 6ನೇ ಆರೋಪಿಯ ಮಧ್ಯೆ ರಾಜಕೀಯ ದ್ವೇಷ ಇದ್ದ ಕಾರಣ ಇಟ್ಟಿಗೆ ಹಣ ಕೊಡುವ ವಿಚಾರಕ್ಕೆ ಸಂಬಂಧಿಸಿದಂತೆ ನಮ್ಮೊಂದಿಗೆ ದ್ವೇಷ

ಇದ್ದು ಮೂರು ಊರಿನ ಜನರು ಗಲಾಟೆ ಮಾಡಿ ಮೂರು ಜನರನ್ನು ಸಾಯಿಸಿ ಕೊಲೆ ಮಾಡಿರುತ್ತಾರೆ. ಉಳಿದ ಮೂವರಿಗೆ ಮಾರಾಣಾಂತಿಕ ಗಾಯಗೊಳಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ** ಈ ಹಂತದಲ್ಲಿ 1, 5, 6, 4, 17, 6, 11, 13, 14, 15, 16, 18, 19, 3, 7ನೇ ಆರೋಪಿಗಳ ಪರ ವಕೀಲರು ಕಲಂ 231(2) ಕ್ರಿಪ್ರಸಂಹಿತೆ ಅನ್ವಯ ಅರ್ಜಿ ಸಲ್ಲಿಸಿದ್ದು ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಪ್ರಶೀಲಾ ಕುಮಾರಿ ಜಿ ಎಸ್)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ , ಬೆಂಗಳೂರು.